‘ಹೊಟ್ಟೆ ಬರುತ್ತೆ. ಆದರೆ ಹೋಗೋಲ್ಲ; ಕೂದಲು ಹೋಗುತ್ತೆ. ಆದರೆ ಬರೋಲ್ಲ’ ಅಂತ. ಆದರೆ ದಾರ್ಶನಿಕರು ಹೇಳುತ್ತಾರೆ, ‘ಈ ಪ್ರಪಂಚದಲ್ಲಿ ಯಾವುದೂ ಅಸಾಧ್ಯವಲ್ಲ’ ಅಂತ.

# ಬೋಳ್ತಲೆ ಪುರಾಣ

■ ಕೃಷ್ಣಪ್ಪ, ಮೈಸೂರು
ಕಲೆ: ಸಂತೋಷ್ ಸಸಿಹಿತ್ಲು

ಬೋಳ್ತಲೆ ಪುರಾಣದ ಮೇಲೆ ಪ್ರಮಾಣ ಮಾಡಿ ಹೇಳುತ್ತಿದ್ದೇನೆ, ಈ ಬೋಳ್ತಲೆ ಪುರಾಣದ ಮುಖಾಂತರ ಯಾರಿಗೇ ಆಗಲಿ ನೋವುಂಟು ಮಾಡುವ ಉದ್ದೇಶ ಇಲ್ಲ. ಇದು ಕೇವಲ ಮನರಂಜನೆಗಾಗಿ, ಮನೋಲ್ಲಾಸಕ್ಕಾಗಿ ಹಾಗೂ ಮನೋವಿಕಾಸಕ್ಕಾಗಿ. ಇತ್ತೀಚೆಗೆ ಸುಮಾರು ಮಂದಿಗೆ ತಲೆಯಲ್ಲಿ ಕೂದಲು ಉದುರುವುದು ಅತೀ ಸಾಮಾನ್ಯವಾದ ಪ್ರಕ್ರಿಯೆಯಾಗಿದೆ. ಅದರಲ್ಲೂ ವಿಶೇಷವಾಗಿ ಗಂಡಸರಲ್ಲಿ. ಐವತ್ತು ದಾಟಿದ ನಮ್ಮಂತಹರೇ ಕೂದಲು ಉದುರಿದರೆ ಮನಸ್ಸು ಕೆಡಿಸಿಕೊಳ್ಳುತ್ತೇವೆ. ಅಂಥದ್ದರಲ್ಲಿ ಇತ್ತೀಚೆಗೆ ಹರೆಯದಲ್ಲೇ ಕೂದಲು ಉದುರುತ್ತಿದೆ. ಪಾಪ ಅಂತಹವರ ಮನಸ್ಥಿತಿ ಹೇಗಿರಬೇಡ! ಇನ್ನು ಮದುವೆ ಆಗಬೇಕಿರುವವರಿಗಂತೂ.

ಈಗಂತೂ ‘ಬೊಕ್ಕ ತಲೆ ಬ್ಯುಸಿನೆಸ್ ಬಿಲಿಯನ್‌ಗಟ್ಟಲೆ’. ಆಂಗ್ಲ ಪದಗಳನ್ನು ಉಪಯೋಗಿಸಿದ್ದಕ್ಕೆ ಕ್ಷಮೆ ಇರಲಿ. ತರಹೇವಾರಿ ತೈಲಗಳು, ಹೇರ್ ಗ್ರೋತ್ ಸೀರಂಗಳು, ಸ್ಪ್ರೇಗಳು, ಶ್ಯಾಂಪುಗಳು, ವಿಗ್‌ಗಳು, ಹೇರ್ ಟ್ರಾನ್ಸ್‌ಪ್ಲಾಂಟ್‌ಗಳು, ಪ್ಯಾಚ್‌ಗಳು, ಸ್ಟ್ರಿಚ್‌ಗಳು, ಆ ಗಳು ಈ ಗಳು, ಓ ಎಷ್ಟೊಂದು ರೀತಿಯ ಸ್ಕೆಚ್‌ಗಳು, ಬಲೆಗಳು, ಗಾಳಗಳು! ಅಂತೂ ಬಡಪಾಯಿ ಬೋಡ ತಲೆ ಪುರುಷರು (ಕೆಲವು ಮಹಿಳೆಯರು ಸಹ) ಮಿಕಗಳಾಗಿದ್ದೇವೆ. ಬೋಡ ತಲೆ ವರವೋ, ಶಾಪವೋ ಗೊತ್ತಿಲ್ಲ. ಆದರೆ ಸುಮಾರು ವರ್ಷಗಳ ಹಿಂದೆ ಓದಿದ್ದ ನೆನಪು. ಮಾನವನ ವಿಕಾಸದ ಹಾದಿಯಲ್ಲಿ ಯಾವ ಅಂಗಾಂಗದ ಉಪಯೋಗ ಇಲ್ಲವೋ ಅಂತಹ ಅಂಗಗಳು ಕಾಲ ಕ್ರಮೇಣ ಇಲ್ಲವಾಗುತ್ತವೆ

